**PCR 159-2026**

**ದಿ: 09.06.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.**

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಪ್ರಮಾಣಿಕೃತ ಹೇಳಿಕೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಮತ್ತು ಸದರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿ: 26.12.2024 ರಂದು ಆರೋಪಿಯು ನೀಡಿದ ಬ್ಯಾಂಕ್ ಆಫ್ ಬರೋಡಾ, ನೆರೀಗಾ ಶಾಖೆಯ ಚೆಕ್ ಸಂಖ್ಯೆ 000013ನ್ನು ಹಾಜರುಪಡಿಸಿದ್ದು ನಿಪಿ.1 ಎಂದು, ದಿ: 31.12.2024 ರಂದು ನಿಪಿ.1 ಮಾನ್ಯಗೊಳ್ಳದ ಕುರಿತು ಕರ್ನಾಟಕ ಬ್ಯಾಂಕ್, ದೇವಲಾಪುರ-ದೇವನಗುಂದಿ ಶಾಖೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ನಿಪಿ.2 ಎಂದು, ದಿ: 26.12.2024 ರಂದು ಆರೋಪಿಯು ನೀಡಿದ ಬ್ಯಾಂಕ್ ಆಫ್ ಬರೋಡಾ, ನೆರೀಗಾ ಶಾಖೆಯ ಚೆಕ್ ಸಂಖ್ಯೆ 000014ನ್ನು ಹಾಜರುಪಡಿಸಿದ್ದು ನಿಪಿ.3 ಎಂದು, ದಿ: 31.12.2024 ರಂದು ನಿಪಿ.3 ಮಾನ್ಯಗೊಳ್ಳದ ಕುರಿತು ಕರ್ನಾಟಕ ಬ್ಯಾಂಕ್, ದೇವಲಾಪುರ-ದೇವನಗುಂದಿ ಶಾಖೆಯವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ನಿಪಿ.4 ಎಂದು, ದಿ:10.01.2025 ರಂದು ವಕೀಲರ ಮೂಲಕ ಆರೋಪಿಗೆ ನೀಡಿದ ನೋಟಿಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.5 ಎಂದು, ನಿಪಿ.5 ಆರೋಪಿಗೆ ಕಳುಹಿಸಿದ ಕುರಿತು ಎರಡು ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.6 ಎಂದು, ನಿಪಿ.5 ಆರೋಪಿಗೆ ಜಾರಿಯಾದ ಕುರಿತು ಎರಡು ಅಂಚೆ ಹಿಂಬರಹಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.7 ಮತ್ತು 8 ಎಂದು, ದಿಃ 25.09.2024 ರಂದು ರಾಧಮ್ಮ ಮತ್ತು ಭರತ್ ರವರು ಬರೆದುಕೊಟ್ಟ ಒಪ್ಪಿ ಗೆ ಪತ್ರದ ದೃಢಿಕೃತ ಪ್ರತಿಯನ್ನು ನಿಪಿ.9 ಎಂದು, ಖಾಸಗಿ ಪಿರ್ಯಾದು ಸಂಖ್ಯೆಃ 44/2025 ರ ನಡವಳಿಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ.10 ಎಂದು ಗುರುತಿಸಲಾಯಿತು. ಆದ್ದರಿಂದ ಪಿರ್ಯಾದನ್ನು ಪರಿಗಣಿಸಿ ಆರೋಪಿಯ ವಿರುದ್ಧ ಕಲಂ 138 ಎನ್.ಐ ಆಕ್ಟ್ ಅಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ವಿನಂತಿ ಇದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.